**ದಿನಾಂಕ: 30–11–2012 ರಂದು ನಡೆದ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿದ ರೈತರ ಕೆಲವು ಬೇಡಿಕೆ ಮತ್ತು ಸಮಸ್ಯೆಗಳು.**

1. ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮಕ್ಕೊಂದು ಕೆರೆಕಟ್ಟೆಗಳನ್ನು ನಿರ್ಮಾಣ ಮಾಡುವುದು.
2. ಶೇ.10 ರಷ್ಟು ನೀರಿನ ಉಳಿತಾಯ ಹಾಗೂ ಶೇ.25 ರಷ್ಟು ಆರೋಗ್ಯದ ವೃದ್ಧಿಗಾಗಿ ರಾಜ್ಯದಲ್ಲಿ 25,000 ಕಬ್ಬಿನ ಹಾಲಿನ ಅಂಗಡಿಗಳನ್ನು ತೆಗೆಯವುದು .
3. ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳ ಕುಡಿಯುವ ನೀರಿನ ಕ್ಷಾಮವನ್ನು ನೀಗಿಸಲು ಶ್ರೀ ಪರಮಶಿವಯ್ಯರವರ ವರದಿಯನ್ನು ಅನುಷ್ಠಾನಗೊಳಿಸುವುದು.
4. ಕನಕಪುರ ತಾಲ್ಲೂಕು ಸಾತನೂರು ಹೋಬಳಿಯ ರೈತರ ಜಮೀನುಗಳಿಗೆ ನೀರಾವರಿ ಮೂಲಕ ನೀರು ತುಂಬಿಸುವ ಯೋಜನೆಯನ್ನು ಜಲಸಂಪನ್ಮೂಲ ಇಲಾಖೆ ಅಥವಾ ಕಾವೇರಿ ನೀರಾವರಿ ನಿಗಮ ಮಂಡಳಿಯ ಮುಖಾಂತರ ಯೋಜನೆ ರೂಪಿಸುವುದು.
5. ಕೃಷಿ ಉಪಕರಣಗಳನ್ನು ಮತ್ತು ರಸಗೊಬ್ಬರಗಳನ್ನು ಸಣ್ಣ ಅಥವಾ ದೊಡ್ಡ ರೈತರೆಂದು ನಿರ್ಣಯಿಸಿ ರಿಯಾಯಿತಿ ರೂಪದಲ್ಲಿ ವಿತರಣೆ ಮಾಡುವುದು.
6. ಸಣ್ಣ ರೈತರು ಖರೀದಿಸುವ ಕೃಷಿ ಉಪಕರಣಗಳಿಗೆ ಕರ ವಿಧಿಸುವುದನ್ನು ರದ್ದುಪಡಿಸುವುದು.
7. ಸಣ್ಣ ರೈತರ ಮಕ್ಕಳಿಗೆ ಸರ್ಕಾರಿ ಹುದ್ದೆಯಲ್ಲಿ ಮೀಸಲಾತಿ ತರುವುದು.
8. ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಹತ್ತು ಎಕೆರೆವರೆಗಿನ ಸಣ್ಣ ರೈತರಿಗೆ ಮರಳು ಸೈಜುಕಲ್ಲು ಮತ್ತು ಇಟ್ಟಿಗೆ ಸಾಗಾಣಿಕೆ ಟ್ರಾಕ್ಟರ್‌ಗಳ ಮಾಲೀಕರಿಗೆ ತಹಶೀಲು ಮತ್ತು ಅರಣ್ಯಾಧಿಕಾರಿ ಪೋಲೀಸರಿಂದ ದಂಡ ಹಾಕದಂತೆ ಆದೇಶಿಸುವುದು.
9. ಆಧುನಿಕ ಕೃಷಿ ಯಂತ್ರೋಪಕರಣ ಹೊಂದಿದ ರೈತರಿಗೆ ಕಡ್ಡಾಯವಾಗಿ ಶೇ.50 ರಿಂದ 75 ರಷ್ಟು ರಿಯಾಯಿತಿ ದರದಲ್ಲಿ(ಸಾಮಾನ್ಯ ಮತ್ತು ಪರಿಶಿಷ್ಟರಿಗೆ) ದೊರೆಯುವಂತೆ ಮಾಡುವುದು.
10. ಸರ್ಕಾರದಿಂದ ಕೃಷಿ ಅಲ್ಪಾವಧಿ ಬೆಳೆ ಸಾಲಗಳ ಬಡ್ಡಿಯನ್ನು ಶೂನ್ಯ ಮತ್ತು ಶೇ. 1ರ ಬಡ್ಡಿ ದರದಲ್ಲಿ ಎಲ್ಲಾ ರೈತರಿಗೆ ವಿಸ್ತರಿಸುವುದು.
11. ಅರಣ್ಯ ಪ್ರದೇಶದಲ್ಲಿ ಯಾವುದೇ ಉದ್ಯಮ ನಡೆಸುವುದನ್ನು ತಡೆದು ಭೂ–ಸುಧಾರಣಾ ಕಾನೂನನ್ನು ತೀವ್ರಗೊಳಿಸಿ ಹೆಚ್ಚುವರಿ ಭೂಮಿಯನ್ನು ರೈತರಿಗೆ ನೀಡುವುದು. ಕುಟುಂಬ ಕಲ್ಯಾಣ ಯೋಜನೆಯಿಂದ ರೈತರನ್ನು ಕೈಬಿಡುವುದು.
12. ಕೃಷಿ ಇಲಾಖೆಯಿಂದ ಬರುವಂತಹ ಸವಲತ್ತು, ಅಂದರೆ ಬೀಜ, ಗೊಬ್ಬರ, ಕೀಟನಾಶಕ ಔಷಧಿ ಇತ್ಯಾದಿಗಳನ್ನು ಪಂಚಾಯ್ತಿ ವ್ಯಾಪ್ತಿಯಲ್ಲಿ ವಿತರಿಸುವುದು.
13. ಪ್ರತಿಯೊಂದು ಮಂಡಲ ಪಂಚಾಯಿತಿ ವ್ಯಾಪ್ತಿಗೆ ಒಂದು ಗ್ರಾಮೀಣ ಬ್ಯಾಂಕ್ ತೆರೆಯುವುದು.
14. ಸರ್ಕಾರದಿಂದ ಕೊಡತಕ್ಕ ಸೌಲಭ್ಯಗಳನ್ನು ಎಲ್ಲಾ ಯೋಜನೆಗಳೊಂದಿಗೆ ತಮ್ಮ ಗ್ರಾಮಕ್ಕೆ ನೇರವಾಗಿ ಕೊಡುವ ವ್ಯವಸ್ಥೆಯನ್ನು ಶೀಘ್ರವಾಗಿ ಕಾರ್ಯರೂಪಕ್ಕೆ ತರುವುದು.

15. ರೈತರಿಗೆ ಪ್ರತಿ ವರ್ಷ ಬಿತ್ತನೆ ಸಮಯದಲ್ಲಿ ಶೂನ್ಯ ಬಡ್ಡಿದರದಲ್ಲಿ ಸಾಲ ವಿತರಣೆ ಹಾಗೂ ಸಮಾನ 3 ಕಂತುಗಳಲ್ಲಿ ಮರುಪಾವತಿಗೆ ಅವಕಾಶ ನೀಡುವುದು.

**<u>ದಿನಾಂಕ: ೧೦-೦೧-೨೦೧೪ ರಂದು ನಡೆದ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿದ ರೈತರ ಕೆಲವು ಬೇಡಿಕೆ ಮತ್ತು ಸಮಸ್ಯೆಗಳು.</u>**

೧. ಪ್ರತಿ ವರ್ಷ ಡಿಸೆಂಬರ್ ೨೩ ರಂದು 'ರೈತ ದಿನಾಚರಣೆ' ಯನ್ನು ಕೃಷಿಗೆ ಸಂಬಂದಿಸಿದ ಇಲಾಖೆಯಿಂದ ರಾಜ್ಯದ ಎಲ್ಲಾ ತಾಲ್ಲೂಕು ಹಾಗೂ ಹೋಬಳಿಯಲ್ಲಿ ಕಡ್ಡಾಯವಾಗಿ ಆಚರಿಸಬೇಕೆಂದು ಸರ್ಕಾರಿ ಆದೇಶ ಹೊರಡಿಸುವುದು.

೨. ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ನಿಗಧಿಪಡಿಸುವುದು.

೩. ಭತ್ತ ಬೆಳೆಯುವ ರೈತರು ಇತ್ತೀಚಿಗೆ ಕಡಿಮೆಯಾಗುತ್ತಾ ಇರುವುದರಿಂದ ಭತ್ತ ಬೆಳೆಯುವ ರೈತರಿಗೆ ಎಕರೆಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ.

೪. ಬಿತ್ತನೆ ಬೀಜಕ್ಕೆ ಸಬ್ಸಿಡಿ ಕೊಡುವುದರ ಮೂಲಕ ರೈತರನ್ನು ಸೋಮಾರಿಗಳನ್ನಾಗಿ ಮಾಡುವುದನ್ನು ಬಿಟ್ಟು, ರೈತರೇ ಸ್ವತ: ಬಿತ್ತನೆ ಬೀಜ ತಯಾರಿ ಮಾಡಿಕೊಳ್ಳುವಂತಹ ತರಬೇತಿ ಕೊಡುವುದು.

೫. ಕೃಷಿಕ ಸಮಾಜದವರು ಕೃಷಿ ಇಲಾಖೆಯ ಜನಪರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಸರ್ಕಾರ ಆದೇಶ ಮಾಡುವುದು.

೬. ಕೃಷಿ ಇಲಾಖೆಯ ಸಬ್ಸಿಡಿ ಪೂರ್ಣ ಹಣವನ್ನು ರೈತರ ಖಾತೆಗೆ ಜಮಾ ಮಾಡಬೇಕು.

೭. ಭತ್ತ ನಾಟಿ ಯಂತ್ರಕ್ಕೆ ಕಾರ್ಮಿಕರ ಕೊರತೆ ಇರುವುದರಿಂದ ಶೇ:೯೦ರಷ್ಟು ಸಬ್ಸಿಡಿ ನೀಡಬೇಕು. ಭತ್ತಕ್ಕೆ ೩೦೦೦ ಬೆಂಬಲ ನೀಡಬೇಕು ಹಾಗೂ ಬೆಳೆ ಹಾನಿಗೆ ರೈತರಿಗೆ ಎಕರೆಗೆ ೧೦೦೦೦ ರೂ.ಗಳ ಬೆಳೆ ಪರಿಹಾರ ನಿಗಧಿಪಡಿಸಬೇಕು

೮. ತಾಲ್ಲೂಕಿನ ಹೆಚ್ಚಿನ ಪ್ರದೇಶ ಅರಣ್ಯದಿಂದ ಕೂಡಿದ್ದು, ಸಾಗುವಳಿ ಕ್ಷೇತ್ರದಲ್ಲಿ ಕಾಡು ಪ್ರಾಣಿಗಳು ಬಂದು ಬೆಳೆ ಹಾನಿ ಮಾಡುತ್ತಿದ್ದು, ಅದರ ನಿಯಂತ್ರಣಕ್ಕಾಗಿ ಸೋಲಾರ ತಂತಿ ಬೇಲಿ ರಿಯಾಯ್ತಿಯಲ್ಲಿ ಒದಗಿಸಬೇಕು.

೯. ಕೃಷಿ ಇಲಾಖೆಯಿಂದ ಕನಿಷ್ಠ ೧೦ ಹೆಚ್ಚು ಒಕ್ಕಣೆ ಕಣವನ್ನು ಅವರ ಜಮೀನಿಗೆ ತಕ್ಕಂತೆ ಶೇ:೭೫ ರಷ್ಟು ರಿಯಾಯ್ತಿಯಲ್ಲಿ ನೀಡಬೇಕು.

೧೦. ಕೃಷಿ ಬೆಳೆಯ ಸಂರಕ್ಷಣೆಗೆ ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಸೌರ ವಿದ್ಯುತ್ ಬೇಲಿಯನ್ನು ಅಳವಡಿಸಲು ಶೇ:೭೫ ರಷ್ಟು ಸಹಾಯಧನ ನೀಡಬೇಕು.

೧೧. ಜಾನುವಾರು ಸಾಕಾಣಿಕೆಗೆ ೨.೦೦ ಲಕ್ಷ ರೂಪಾಯಿಗಳು ಬಡ್ಡಿ ರಹಿತ ಸಾಲವಾಗಿ ಕೊಡಲು ಖೋರಿಕೆ.

೧೨. ವಿವಿಧ ಬೆಳೆಗಳಿಗೆ ಬೆಂಬಲ ಬೆಲೆ ಕೊಡುವ ಕುರಿತು.ಜೋಳ, ಕಡಲೆ, ತೊಗರಿ, ಹೆಸರು, ಈರುಳ್ಳಿ, ಕುಸುಬೆ, ಗೋಧಿ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ನೀಡಬೇಕು.

೧೩. ಕೃಷಿ ಉಪಕರಣಗಳಿಗೆ ಸಹಾಯಧನ ಶೇ:೫೦ ರಷ್ಟು ಇರುವುದನ್ನು ಎಲ್ಲಾ ವರ್ಗದ ರೈತರಿಗೂ ಸಮಾನವಾಗಿ ಸಹಾಯಧನವನ್ನು ನಿಗಧಿಗೊಳಿಸಬೇಕು.

೧೪. ರೈತರ ಟ್ರಾಕ್ಟರ್‌ಗಳಿಗೆ ಮೊದಲಿನ ಸಹಾಯಧನ ಮುಂದುವರಿಸಬೇಕು.

೧೫. ಮಲಪ್ರಭ ನದಿಯಿಂದ ಮಹಾದಾಯಿ ನದಿಯಿಂದ ಹೆಚ್ಚು ನೀರು ದೊರಕಿಸಲು ರೈತರ ಅನುಕೂಲಕ್ಕಾಗಿ ಸರ್ಕಾರದ ಮೇಲೆ ಒತ್ತಡ ತರಬೇಕು.

೧೬. ರೈತರ ಮಕ್ಕಳಿಗೆ ಶಿಕ್ಷಣ ಹಾಗೂ ಸೇವೆಯಲ್ಲಿ ಆಧ್ಯತೆ ಇರಲಿ.

೧೭. ಚಾಮರಾಜನಗರ ಜಿಲ್ಲೆಯ ತೀವ್ರ ಬರಗಾಲದಿಂದ ಕೂಡಿದ್ದು, ಅತಿ ಹಿಂದುಳಿದ ಗಡಿ ಜಿಲ್ಲೆಯಾಗಿದೆ. ಬರಗಾಲದಿಂದ ಇಲ್ಲಿನ ಅಂತರಜಲ ಕುಸಿದು ಕುಡಿಯುವನೀರು, ಜನ, ಜಾನುವಾರುಗಳಿಗೆ ತುಂಬಾ ತೊಂದರೆಯಾಗಿದೆ. ಡ್ರಿಪ್ ಇರಿಗೇಷನ್ ಮಾಡಿಸಲು ಸರ್ಕಾರಕ್ಕೆ ಒತ್ತಡ ತರಬೇಕು.

೧೮. ಕಬ್ಬಿನ ಬೆಲೆಯನ್ನು ರಾಜ್ಯದಲ್ಲಿ ಏಕರೂಪ ಬೆಲೆ ನಿಗಧಿಪಡಿಸಲು ಅಂದರೆ ೨೫೦೦+೧೫೦=೨೬೫೦ ಒಂದೇ ಕಂತಿನಲ್ಲಿ ನೀಡಲು ಕೃಷಿಕ ಸಮಾಜ ಸರ್ಕಾರಕ್ಕೆ ಒತ್ತಯಿಸಬೇಕು

೧೯. ಸೋಲಾರ್‌ಪವರ್‌ಪ್ಲಾಂಟ್ ಸ್ಥಾಪಿಸಲು ಸರ್ಕಾರದಿಂದ ಸಹಾಯಧನ ಮತ್ತು ಸಬ್ಸಿಡಿ ನೀಡಬೇಕು.

೨೦. ಚಿಕ್ಕನಾಯಕನಹಳ್ಳಿ ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ರೈತರ ಸಾಲ ಮನ್ನಾ ಕಡ್ಡಾಯ ಮಾಡುವುದು ತಾಲ್ಲೂಕಿಗೆ ಶಾಶ್ವತ ನೀರಾವರಿ ಕಲ್ಪಿಸುವುದಕ್ಕೆ ಒತ್ತಾಯಿಸುವುದು.

೨೧. ಕೃಷಿ ಕೆಲಸ ಮಾಡುವಾಗ ಹಾವು ಕಡಿತದಿಂದ ಮರಣ ಸಂಭವಿಸಿದರೆ ಸರ್ಕಾರ ನೀಡುವ ಪರಿಹಾರ ಹಣ ಕಡಿಮೆ ಇದೆ. ಇದನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿದರು.

೨೨. ಕೇಂದ್ರ ಸರ್ಕಾರ ಅಡಿಕೆ ಬೆಳೆ ಹಾನಿಕಾರಕ ಎಂದು ಸುಪ್ರೀಂ ಕೋರ್ಟ್ ನೀಡಿದ ವರದಿಯನ್ನು ಹಿಂದೆ ಪಡೆದು ರೈತರ, ಕೃಷಿ ಕಾರ್ಮಿಕರ, ವ್ಯಾಪರಸ್ಥರ ಹಿತ ಕಾಪಾಡಬೇಕು.

೨೩. ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿರುವುದರಿಂದ ಕೃಷಿ ವಿಶ್ವವಿದ್ಯಾನಿಲಯಗಳು ಕಡಿಮೆ ಇವೆ. ಆದ್ದರಿಂದ ಕರ್ನಾಟಕದಲ್ಲಿ ಹೆಚ್ಚು ಕೃಷಿ ವಿಶ್ವವಿದ್ಯಾಲಯಗಳನ್ನು ತೆರೆದು ಕೃಷಿ ಪದವಿಗೆ ಪ್ರಾಮುಖ್ಯತೆ ನೀಡಬೇಕು.

೨೪. ಚಿಕ್ಕಮಗಳೂರು ಅಜ್ಜಂಪುರದಲ್ಲಿರುವ ಅಮೃತ್‌ಮಹಲ್ ರಕ್ಷಿತ ಪ್ರದೇಶವನ್ನು ಊರ್ಜಿತಗೊಳಿಸಿ, ಕರ್ನಾಟಕದ ಹೆಮೆಯ ತಳಿಯಾದ ಅಮೃತ್‌ಮಹಲ್ ತಳಿಯನ್ನು ಉಳಿಸಿಕೊಳ್ಳಬೇಕು, ಅಭಿವೃದ್ಧಿಪಡಿಸಬೇಕು. ಅಲ್ಲದೆ ಉತ್ತರ ಕನ್ನಡ ಜಿಲ್ಲೆಗೂ ಈ ತಳಿಯ ಹಂಚಿಕೆಯಾಗಬೇಕು.

**<u>ದಿನಾಂಕ: ೧೧-೦೪-೨೦೧೫ ರಂದು ನಡೆದ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿದ ರೈತರ ಕೆಲವು ಬೇಡಿಕೆ ಮತ್ತು ಸಮಸ್ಯೆಗಳು.</u>**

೧. ರೈತ ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗಧಿಗೊಳಿಸಬೇಕು.
೨. ಬೆಳೆ ವಿಮಾ ನೀತಿ ಪುನರ್ ರಚಿಸಬೇಕು.
೩. ಶೇ:೦% ಬಡ್ಡಿ ದರದಲ್ಲಿ ರೂ. ೩-೦೦ ಲಕ್ಷಗಳವರೆಗೆ ಸಾಲ ಸಿಗುವಂತಾಗಬೇಕು.
೪. ರೈತರ ಪಂಪ್ ಸೆಟ್ಟುಗಳಿಗೆ ನಿರಂತರ ೧೦ ತಾಸು ತ್ರಿಫೇಸ್ ವಿದ್ಯುತ್ ಒದಗಿಸಬೇಕು.
೫. ಸರ್ಕಾರದ ಎಲ್ ೧ ಟೆಂಡರ್ ರದ್ದುಪಡಿಸಿ ಮುಕ್ತ ಮಾರುಕಟ್ಟೆಯಲ್ಲಿ ರೈತ ಕೃಷಿ ಪರಿಕರಗಳನ್ನು ಖರೀದಿಸುವಂತಾಗಬೇಕು.

೬. ವನ್ಯ ಜೀವಿಗಳಿಂದ ಆಗುವ ಅನಾಹುತವನ್ನು ತಪ್ಪಿಸಲು ರೈತನಿಗೆ ಕಾನೂನಿನ ಅಡಿಯಲ್ಲಿ ರಕ್ಷಣೆ ಒದಗಿಸಬೇಕು.

೭. ಕೃಷಿಕಾರ್ಮಿಕರ ಕೊರತೆಯನ್ನು ನೀಗಿಸಲು ಕೃಷಿ ಭೂಮಿಯಲ್ಲಿ ದುಡಿಯುವ ವರ್ಗಕ್ಕೆ ಸರ್ಕಾರದ ಸೌಲಭ್ಯಗಳನ್ನು ಒದಗಿಸಬೇಕು.

೮. ಎಲ್ಲಾ ರೀತಿಯ ಅಸಂಘಟಿತ ಕೂಲಿಕಾಮಿರ್ಕರು ಮತ್ತು ಇತರರು ಇರುವಂತೆ ಎಲಾ ರೈತರಿಗೂ ಜೀವ ವಿಮೆ ಮಾಡಿಸಬೇಕು.

೯. ಭತ್ತ, ರಾಗಿ, ಜೋಳಗಳಿಗೆ ಬೆಂಬಲ ಬೆಲೆ ೨೦೦೦–೦೦ ರೂ.ಗಳ ಮೇಲೆ ಕೊಡಬೇಕು.

೧೦. ಯಳಂದೂರು ತಾಲ್ಲೂಕಿನಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಕೇವಲ ೩ ಗಂಟೆ ವಿದ್ಯುತ್ ನೀಡುತ್ತಿದ್ದು, ಸರ್ಕಾರಿ ಆದೇಶದಂತೆ ೮ ಗಂಟೆಗಳ ಕಾಲ ವಿದ್ಯುತ್ ಪೂರೈಸಬೇಕೆಂದರು.

೧೧. ಹಾವೇರಿ ಜಿಲ್ಲೆಯ ರೈತರ ಬದುಕು ದುಸ್ತರವಾಗಿದೆ. ಯಾವುದೇ ನದಿ ಮೂಲಗಳಿಂದ ನೀರಾವರಿ ಸೌಲಭ್ಯವಿರುವುದಿಲ್ಲ. ವಿದ್ಯುತ್ ಪೂರೈಕೆ ಸಮರ್ಪಕವಾಗಿಲ್ಲ. ಏಷ್ಯಾಖಂಡದಲ್ಲೇ ಬೀಜೋತ್ಪಾದನೆಗೆ ಹಾವೇರಿ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದು, ಸರ್ಕಾರದ ತಪ್ಪು ನೀತಿ ಹಾಗೂ ಅಸಮರ್ಪಕ ಬೀಜ ಕಾಯ್ದೆಯಿಂದ ರೈತ ತತ್ತರಿಸಿ ಹೋಗಿರುತ್ತಾನೆ . ಆದ್ದರಿಂದ ಸರ್ಕಾರ ರೈತರಿಗೆ ಆರ್ಥಿಕ ಭದ್ರತೆ ಒದಗಿಸಬೇಕೆಂದರು.